## ನಿಮ್ಮೊಡನೆ

# ಬಾಲ್ಯ ವಿವಾಹಗಳೇಕೆ ಹೆಚ್ಚುತ್ತಿವೆ?

> ಬಾಲ್ಯವಿವಾಹಗಳನ್ನು ಇಲ್ಲದಂತೆ ಮಾಡಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳು ಜನರನ್ನು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ತಲುಪುತ್ತಿಲ್ಲ ಎನ್ನುವುದು ಸ್ಪಷ್ಟ.

ದೇಶ 71ನೇ ಸ್ವಾತಂತ್ರ್ಯೋತ್ಸವದ ಹೊಸ್ತಿಲಲ್ಲಿದೆ. ಈ ಏಳು ದಶಕಗಳಲ್ಲಿ ಅದೆಷ್ಟೋ ಸಾಮಾಜಿಕ ಸಮಸ್ಯೆಗಳನ್ನು ತೊಡೆದು ಹಾಕಲಾಗಿದೆ. ಕಾನೂನು ತಿದ್ದುಪಡಿ, ಜನರ ಮನವೊಲಿಸುವಿಕೆ, ಸಾಮೂಹಿಕ ಅರಿವು ಮೂಡಿಸುವುದು, ಕಠಿಣ ಶಿಕ್ಷೆ ಮುಂತಾಗಿ ಸಾಮಾಜಿಕ ಸಮಸ್ಯೆಗಳ ನಿರ್ಮೂಲನೆಗೆ ಹಲವು ದಾರಿಗಳಿವೆ. ಪ್ರಪಂಚದಲ್ಲೇ ದೊಡ್ಡ ಪ್ರಜಾಪ್ರಭುತ್ವ ಇರುವ ನಮ್ಮ ದೇಶದಲ್ಲಿ ನೂರೆಂಟು ಧರ್ಮ, ಜಾತಿ, ಸಂಪ್ರದಾಯ, ಸಂಸ್ಕೃತಿ, ವಿಕೃತಿಗಳೆಲ್ಲವೂ ಮಿಳಿತವಾಗಿ ರೂಪುಗೊಂಡಿರುವ ಸಾಮಾಜಿಕ ಸಮಸ್ಯೆಗಳಿಗೆ ಲೆಕ್ಕವಿಲ್ಲ. ಬಹುತೇಕ ಸಮಸ್ಯೆಗಳ ನಿವಾರಣೆ ಸಾಧ್ಯವಾಗಿದ್ದರೂ ಈ ಬಾಲ್ಯವಿವಾಹದ ಪಿಡುಗನ್ನು ಸಂಪೂರ್ಣ ಇಲ್ಲವಾಗಿಸಲು ನಮಗೇಕೆ ಸಾಧ್ಯವಾಗಿಲ್ಲ? ಮೇಲೆ ಸೂಚಿಸಿದ ಎಲ್ಲ ಪರಿಹಾರಕ್ರಮಗಳನ್ನು ಅನುಸರಿಸಿದ್ದರೂ ಇನ್ನೂ ನಮ್ಮ ಸಮಾಜದಲ್ಲಿ ಬಾಲ್ಯವಿವಾಹಗಳು ನಿರಂತರವಾಗಿ ನಡೆದೇ ಇವೆ. ಮಾತ್ರವಲ್ಲ, ವರ್ಷದಿಂದ ವರ್ಷಕ್ಕೆ ಬಾಲ್ಯವಿವಾಹಗಳ ಸಂಖ್ಯೆಯೂ ಹೆಚ್ಚುತ್ತಿದೆ.

ಕಳೆದ ವಾರ ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೊ (ಎನ್‌ಸಿಆರ್‌ಬಿ) ಬಿಡುಗಡೆ ಮಾಡಿದ ಅಂಕಿ ಅಂಶಗಳನ್ನೇ ಗಮನಿಸಿ : 2014ರಲ್ಲಿ ದೇಶದಲ್ಲಿ 516 ಬಾಲ್ಯವಿವಾಹಗಳು ವರದಿಯಾಗಿದ್ದರೆ, 2015ರಲ್ಲಿ 852 ಬಾಲ್ಯವಿವಾಹಗಳು ನಡೆದಿವೆ. 2016ರಲ್ಲಿ ಬಾಲ್ಯವಿವಾಹಗಳ ಸಂಖ್ಯೆ 874ಕ್ಕೇರಿದೆ. ವರ್ಷದಿಂದ ವರ್ಷಕ್ಕೆ ಬಾಲ್ಯವಿವಾಹಗಳ ಸಂಖ್ಯೆ ಏರುತ್ತಲೇ ಇರುವುದು ಏನನ್ನು ಸೂಚಿಸುತ್ತದೆ? ಸರ್ಕಾರ ಕೈಗೊಳ್ಳುತ್ತಿರುವ ಬಾಲ್ಯವಿವಾಹ ವಿರೋಧಿ ಆಂದೋಲನ ಜನರನ್ನು ತಲುಪುತ್ತಿಲ್ಲವೆಂದೆ? ಅಥವಾ ಜನರು ಕಾನೂನಿಗೆ ಬೆಲೆ ಕೊಡುತ್ತಿಲ್ಲವೆಂದೆ? ಕೇಂದ್ರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು, 'ಕಾನೂನು ಕ್ರಮಗಳಿಂದ ಇದನ್ನು ತಡೆಯಲು ಸಾಧ್ಯವಿಲ್ಲ; ಜನರ ಮನೋಭಾವದಲ್ಲಿಯೇ ಬದಲಾವಣೆ ಆಗಬೇಕಿದೆ' ಎಂದಿದ್ದಾರೆ. ಇದು ಒಂದರ್ಥದಲ್ಲಿ ಸರ್ಕಾರದ ಅಸಹಾಯಕತೆಯನ್ನಷ್ಟೇ ಸೂಚಿಸುತ್ತದೆ. ಸರ್ಕಾರ ಈವರೆಗೆ ದೇಶದಲ್ಲಿ ಅತ್ಯಧಿಕ ಬಾಲ್ಯವಿವಾಹಗಳು ನಡೆಯುವ 70 ಜಿಲ್ಲೆಗಳನ್ನು ಗುರುತಿಸಿ ಪ್ರಚಾರಾಂದೋಲನ ಕೈಗೊಂಡಿದೆ ಎಂದೂ ಸಚಿವರು ಹೇಳಿದ್ದಾರೆ. ಆದರೆ ಸರ್ಕಾರದ ಈ ಕ್ರಮಗಳು ಜನರನ್ನು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ತಲುಪುತ್ತಿಲ್ಲ ಎನ್ನುವುದು ಸ್ಪಷ್ಟ.

ಕರ್ನಾಟಕವಂತೂ ಈ ಬಾಲ್ಯವಿವಾಹಗಳ ಪಟ್ಟಿಯಲ್ಲಿ ದೇಶದಲ್ಲೇ (ತಮಿಳುನಾಡಿನ ಬಳಿಕದ) ಎರಡನೇ ಸ್ಥಾನ ಪಡೆದಿದೆ. 2014ರಿಂದ ಮೂರು ವರ್ಷಗಳಲ್ಲಿ ಕರ್ನಾಟಕದಲ್ಲಿ ಒಟ್ಟು 130 ಬಾಲ್ಯವಿವಾಹಗಳು ನಡೆದಿವೆ. 2014ರಲ್ಲಿ ರಾಜ್ಯದಲ್ಲಿ 44 ಬಾಲ್ಯವಿವಾಹಗಳು ವರದಿಯಾಗಿದ್ದರೆ, 2015ರಲ್ಲಿ 35 ಬಾಲ್ಯವಿವಾಹಗಳು ನಡೆದಿವೆ. ಆದರೆ 2016ರಲ್ಲಿ ಈ ಸಂಖ್ಯೆ 51ಕ್ಕೇರಿದೆ! ಇದು ವರದಿಯಾದದ್ದು; ಸರ್ಕಾರದ, ಸಂಘ ಸಂಸ್ಥೆಗಳ ಗಮನಕ್ಕೆ ಬರದೆ ಗುಟ್ಟಾಗಿ ನಡೆದಿರುವ ಬಾಲ್ಯವಿವಾಹಗಳು ಹೆಚ್ಚೇ ಇರಬಹುದು. ಕರ್ನಾಟಕದಲ್ಲಿ ಅತ್ಯಧಿಕ ಸಂಖ್ಯೆಯ ಬಾಲ್ಯವಿವಾಹಗಳು ನಡೆದಿರುವುದು ಬಾಗಲಕೋಟೆ ಜಿಲ್ಲೆಯಲ್ಲಿ. ರಾಜ್ಯದ ಮಕ್ಕಳ ಮತ್ತು ಮಹಿಳಾ ಕಲ್ಯಾಣ ಸಚಿವ ಉಮಾಶ್ರೀಯವರೂ ಈ ಜಿಲ್ಲೆಯವರೇ. ಬಾಗಲಕೋಟೆ ಜಿಲ್ಲೆಯ ತೇರದಾಳ ಕ್ಷೇತ್ರದಿಂದ ಅವರು ವಿಧಾನಸಭೆಗೆ ಆಯ್ಕೆಯಾಗಿದ್ದಾರೆ. ರಾಜ್ಯದ ಸಂಪುಟದಲ್ಲಿ ಇರುವ ಏಕೈಕ ಮಹಿಳೆಯೂ ಆಗಿರುವ ಸಚಿವೆ, ಈ ಸಾಮಾಜಿಕ ಪಿಡುಗಿನ ಬಗ್ಗೆ ವಿಶೇಷ ಗಮನ ಹರಿಸಬೇಕಾದ ಅಗತ್ಯವಿದೆ. ರಾಜ್ಯದಲ್ಲಿ ಸಾಕಷ್ಟು ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ದಾವಣಗೆರೆ ಜಿಲ್ಲೆಯೂ ಬಾಲ್ಯವಿವಾಹದಲ್ಲಿ ಬಾಗಲಕೋಟೆ ಜಿಲ್ಲೆಗೆ ಸರಿಸಮನಾಗಿ ನಿಂತಿದೆ.

ಸಮಾಜ ವಿಜ್ಞಾನಿಗಳ ವಿಶ್ಲೇಷಣೆಯ ಪ್ರಕಾರ, ದೇಶದಲ್ಲಿ ಬರಗಾಲ ತೀವ್ರವಾಗಿರುವ ಜಿಲ್ಲೆಗಳಲ್ಲಿ ಬಾಲ್ಯವಿವಾಹಗಳು ಹೆಚ್ಚಾಗಿ ನಡೆಯುತ್ತಿವೆ. ಅಂದರೆ ಮದುವೆ ಎನ್ನುವುದು ಗಂಡಿಗೆ ಆರ್ಥಿಕ ಆದಾಯ ತಂದುಕೊಡುವ ಮೂಲವಾಗಿದೆಯೆ? ವರದಕ್ಷಿಣೆ, ವರೋಪಚಾರ ಮುಂತಾಗಿ ಸಂಪ್ರದಾಯಗಳ ಹೆಸರಿನಲ್ಲಿ ನಡೆಯುತ್ತಿರುವ ಶೋಷಣೆ ಕೇವಲ ಬಾಲ್ಯವಿವಾಹಗಳಲ್ಲಿ ಮಾತ್ರವಲ್ಲ, ವಯಸ್ಕರ ವಿವಾಹಗಳಲ್ಲೂ ಕಂಡುಬರುತ್ತವೆ. ಕೇವಲ ಬರಗಾಲವನ್ನು ದೂರುವುದು ಸರಿಯಲ್ಲ. ಬಾಲ್ಯವಿವಾಹ ಉಂಟು ಮಾಡುವ ಸಮಸ್ಯೆಗಳೂ ಹೇರಳವಾಗಿವೆ. ಎಳವೆಯಲ್ಲೇ ಮಗುವಿಗೆ ಜನ್ಮ ಕೊಡುವುದು, ಸರಿಯಾದ ಪೋಷಕಾಂಶಗಳಿಲ್ಲದೆ ಗರ್ಭಿಣಿಯರು ಸಾವನ್ನಪ್ಪುವುದು, ಮಕ್ಕಳೂ ಪೋಷಕಾಂಶಗಳ ಕೊರತೆಯಿಂದ ದುರ್ಬಲರಾಗುವುದು– ಹೀಗೆ ಸಂಕಷ್ಟಗಳ ಸರಣಿ ಮುಂದುವರಿಯುತ್ತದೆ.

ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ವಿಶೇಷ ಹಾಗೂ ನಿರ್ದಾಕ್ಷಿಣ್ಯ ಕ್ರಮಗಳನ್ನು ಕೈಗೊಂಡು ಬಾಲ್ಯವಿವಾಹಗಳನ್ನು ನಿಲ್ಲಿಸಬೇಕು. ಕರ್ತವ್ಯಲೋಪ ತೋರುವ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಜನಪ್ರತಿನಿಧಿಗಳು ಹೆಚ್ಚು ಮುತುವರ್ಜಿ ವಹಿಸಿ ಜನರ ಮನವೊಲಿಸಬೇಕು. ಜತೆಗೆ ಇಂತಹ ಅನಿಷ್ಟ ಪಿಡುಗುಗಳ ವಿರುದ್ಧ ಜನಜಾಗೃತಿ ಮೂಡಿಸುತ್ತಿರುವ ಸ್ವಯಂಸೇವಾ ಸಂಸ್ಥೆಗಳನ್ನು ಇನ್ನಷ್ಟು ಬಲಪಡಿಸಬೇಕು.

■ ಬಿ.ಎಂ.ಹನೀಫ್



ಈಶ್ವರ್